**ಸಿ.ಸಿ. ನಂಃ 2417/2021**

**ಡಿ.ಡಬ್ಲ್ಯೂಃ 1**

**ದಿನಾಂಕ 07.08.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪಿರ್ಯಾದಿದಾರರ ಪರ: ಶ್ರೀ.ಬಿ.ವಿ.ಎನ್. ವಕೀಲರಿಂದಃ**

1.ನಾನು ಕೇವಲ ಕರೋನಾ ಕಾಯಿಲೆ ವ್ಯಾಪಕವಿದ್ದಾಗ ಮಾತ್ರ ಬಟ್ಟೆ ವ್ಯಾಪಾರ ನಡೆಸಿದ್ದು, ನಾನು ಈಗ ಚಿಲ್ಲರೆ ಅಂಗಡಿಯನ್ನು ನಡೆಸುತ್ತಿದ್ದೇನೆ. ನಾನು ಈ ಹಿಂದೆ ನಡೆಸುತ್ತಿದ್ದ ಬಟ್ಟೆ ಅಂಗಡಿಯನ್ನು ನನ್ನ ಸಹೋದರನಾದ ತಜ್ಜು @ತಬ್ರಿಜ್ ಖಾನ್ ರವರು ನಡೆಸುತ್ತಿದ್ದಾರೆ ಎಂದರೆ ಸರಿ. ನಾನು ಬಟ್ಟೆ ವ್ಯಾಪಾರ ಆರಂಭಿಸುವಾಗ ಸ್ವಲ್ಪ ಸಾಲವನ್ನು ಮಾಡಿದ್ದೆ ಎಂದರೆ ಸರಿಯಲ್ಲ. ನಾನು ಬೇರೆಯವರಿಂದ ಪಡೆದಿದ್ದ ಸಾಲದ ಸಂಬಂಧ ಸದರಿ ಸಾಲಗಾರರು ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಸಿ.ಸಿ.786/2022 ರ ಚೆಕ್ ಬೌನ್ಸ್ ಪ್ರಕರಣವನ್ನು ಅನಿಲ್ ಕುಮಾರ ಎನ್ನುವವರು ಹೂಡಿದ್ದರು ಎಂದರೆ ಸರಿ. ಸಿ.ಸಿ.786/2022 ರ ಪ್ರಕರಣವನ್ನು ನಾನು ರಾಜಿ ಮೂಲಕ ಇತ್ಯರ್ಥಪಡಿಸಿಕೊಂಡಿರುತ್ತೇನೆ ಎಂದರೆ ಸರಿ.

2. ನನ್ನ ಜೊತೆ ಪ್ರಕಾಶ ಹಾಗೂ ಇನ್ನಿತರ 20 ಜನರು ಸೇರಿ ಬಟಗನಹಳ್ಳಿ ಗ್ರಾಮದ ಶ್ರೀನಿವಾಸರವರೊಂದಿಗೆ ಚೀಟಿ ವ್ಯವಹಾರವನ್ನು ಮಾಡಿರುತ್ತೇವೆ. ನನ್ನ ಜೊತೆ ಚೀಟಿ ವ್ಯವಹಾರ ಮಾಡುತ್ತಿದ್ದ ಸದರಿ ಪ್ರಕಾಶರವರು ಊರು ಬಿಟ್ಟು ಬೇರೆ ಕಡೆಗೆ ಹೋಗಿದ್ದು, ಅವರು ಎಲ್ಲಿದ್ದಾರೆ ಎಂದು ನನಗೆ ಗೊತ್ತಿರದ ಕಾರಣ ಅವರನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷಿ ವಿಚಾರಣೆ ಮಾಡಲು ಸಾಧ್ಯವಿಲ್ಲ.

3. ನಿಪಿ.1 ರ ಚೆಕ್ಕು ನನ್ನದೇ ಚೆಕ್ಕು ಎಂದರೆ ಸರಿ. ನಿಪಿ.1 ರಲ್ಲಿರುವ ಸಹಿ ನನ್ನ ಸಹಿ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಪಿ.1 ರಲ್ಲಿರುವ ಬರವಣಿಗೆಗಳು ನನ್ನ ಬರವಣಿಗೆಗಳಲ್ಲ ಎಂದು ಸ್ವತಃ ನುಡಿದಿರುತ್ತಾರೆ. ನಾನು ಪಿರ್ಯಾದಿದಾರರಿಂದ ಪಡೆದ ಸಾಲದ ಮರುಪಾವತಿಗಾಗಿ ನಿಪಿ.1 ರ ಚಕ್ಕನ್ನು ಪಿರ್ಯಾದಿದಾರರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.3 ರ ನೋಟಿಸು ನನಗೆ ತಲುಪಿರುತ್ತದೆ ಎಂದರೆ ಸರಿ. ನಿಪಿ.3 ರ ನೋಟಿಸಿಗೆ ನಾನು ಪ್ರತ್ಯುತ್ತರ ನೋಟಿಸನ್ನು ನೀಡಿರುತ್ತೇನೆ ಎಂದರೆ ಸರಿ. ನಿಪಿ.10 ರ ಪ್ರತ್ಯುತ್ತರ ನೋಟಿಸನ್ನು ತಯಾರಿಸಲು ನಾನೇ ವಕೀಲರಿಗೆ

This is a True Copy of the Court Records Online. Authenticated @ districts.ecourtsindia.com/cnr/KAMS410037072021/truecopy/order-6.pdf

ಮಾಹಿತಿ ನೀಡಿರುತ್ತೇನೆ. ಬಟಗನಹಳ್ಳಿ ಗ್ರಾಮದ ಶ್ರೀನಿವಾಸರವರು ಗ್ರಾಮ ಪಂಚಾಯಿತಿ ಸದಸ್ಯರು ಎಂದು ನಾನು ನಿಪಿ.10 ರ ಪ್ರತ್ಯುತ್ತರ ನೋಟಿಸಿನಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ಬಟಗನಹಳ್ಳಿ ಗ್ರಾಮದ ಶ್ರೀನಿವಾಸರವರು ಗ್ರಾಮ ಪಂಚಾಯಿತಿ ಸದಸ್ಯರಲ್ಲ ಬದಲಾಗಿ ಈ ಪ್ರಕರಣದ ಪಿರ್ಯಾದಿದಾರರು ಗ್ರಾಮ ಪಂಚಾಯಿತಿ ಸದಸ್ಯರಾಗಿರುತ್ತಾರೆ ಎಂದರೆ ಸರಿಯಲ್ಲ.

4. ಭೇರ್ಯ ಮತ್ತು ಬಟಗನಹಳ್ಳಿಯ ಮಧ್ಯೆ 200 ಮೀಟರ್ ಅಂತರ ಮಾತ್ರ ಇದೆ ಎಂದರೆ ಸರಿ. ಭೇರ್ಯ ಗ್ರಾಮವು ಬಟಗನಹಳ್ಳಿಯ ಸಮೀಪವಿದ್ದ ಕಾರಣ ನಾನು ನಡೆಸುತ್ತಿದ್ದ ಬಟ್ಟೆ ಅಂಗಡಿಯಲ್ಲಿಯೇ ಪಿರ್ಯಾದಿದಾರರು ತಮಗೆ ಹಾಗೂ ತಮ್ಮ ಕುಟುಂಬದವರಿಗೆ ಬಟ್ಟೆ ಖರಿದಿಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಪರಿಚಯದ ಆಧಾರದ ಮೇರೆಗೆ ನಾನು ಪಿರ್ಯಾದಿದಾರರಿಂದ 2,50,000/- ರೂಪಾಯಿ ಸಾಲವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ.

5.ನಿಪಿ.3 ರ ನೋಟಿಸು ತಲುಪಿದ ನಂತರ ನಾನು ಪಿರ್ಯಾದಿದಾರರನ್ನು ಬೇಟಿಯಾಗಿ 20 ದಿನಗಳ ನಂತರ ಸಾಲದ ಹಣವು ಮರುಪಾವತಿ ಮಾಡುವುದಾಗಿ ಭರವಸೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನೀಡಿದ ಭರವಸೆಯ ಪ್ರಕಾರ ಪಿರ್ಯಾದಿದಾರರು ಎರಡನೇ ಬಾರಿಗೆ ನಿಪಿ.1 ರ ಚೆಕ್ಕನ್ನು ಬ್ಯಾಂಕಿಗೆ ನಗದೀಕರಣಕ್ಕಾಗಿ ಹಾಜರುಪಡಿಸಿದ್ದು, ಎರಡನೇ ಬಾರಿಯು ಸಹ ನಿಪಿ.1 ರ ಚೆಕ್ಕು ಅಮಾನ್ಯಗೊಂಡಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಿಪಿ.1 ರ ಚೆಕ್ಕು ಅಮಾನ್ಯಗೊಂಡಿರುವುದು ನಿಜ ಆದರೆ ನಾನು ಪಿರ್ಯಾದಿದಾರರಿಗೆ ಹಣ ಪಾವತಿ ಮಾಡುವುದಾಗಿ ಯಾವುದೇ ಭರವಸೆ ನೀಡಿರುವುದಿಲ್ಲ ಎಂದು ಸ್ವತಃ ನುಡಿದಿರುತ್ತಾರೆ.

6. ಎರಡನೇ ಬಾರಿ ನಿಪಿ.1 ರ ಚೆಕ್ಕು ಅಮಾನ್ಯಗೊಂಡ ಬಳಿಕ ಪಿರ್ಯಾದಿದಾರರು ನನಗೆ ನಿಪಿ.5 ರ ನೋಟಿಸನ್ನು ಕಳುಹಿಸಿರುತ್ತಾರೆ ಎಂದರೆ ಸರಿ. ನಿಪಿ.9 ರಲ್ಲಿರುವ ಸಹಿ ನನ್ನದೇ ಸಹಿ ಆಗಿರುತ್ತದೆ. ನಿಪಿ.5 ರ ನೋಟಿಸಿಗೆ ಉತ್ತರ ನೀಡಲು ನಿಮಗೆ ಏನಾದರು ತೊಂದರೆ ಇತ್ತಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ನಿಪಿ.3 ರ ನೋಟಿಸಿಗೆ ಈಗಾಗಲೇ ನಿಪಿ.10 ರ ಪ್ರತ್ಯುತ್ತರ ನೋಟಿಸು ನೀಡಿದ್ದ ಕಾರಣ ಪುನಃ ಮತ್ತೊಮ್ಮೆ ನಿಪಿ.5 ರ ನೋಟಿಸಿಗೆ ಪ್ರತ್ಯುತ್ತರ ನೋಟಿಸು ನೀಡುವ ಅಗತ್ಯ ಕಂಡುಬಂದಿರುವುದಿಲ್ಲ ಎಂದು ನುಡಿದಿರುತ್ತಾರೆ.

This is a True Copy of the Court Records Online. Authenticated @ districts.ecourtsindia.com/cnr/KAMS410037072021/truecopy/order-6.pdf

7. ಬಟಗನಹಳ್ಳಿ ಶ್ರೀನಿವಾಸರವರು ನನ್ನ ನಿಪಿ.1 ರ ಚೆಕ್ಕನ್ನು ದುರುಪಯೋಗಪಡಿಸಿಕೊಂಡ ಬಗ್ಗೆ ನಾನು ಅವರ ವಿರುದ್ಧಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಕಾರಣ ನನಗೆ ಅವರ ಮೇಲೆ ನಂಬಿಕೆ ಇತ್ತು. ನಾನು ಹೇಳಿದ ಹಾಗೆ ನನ್ನ ಮತ್ತು ಬಟಗನಹಳ್ಳಿ ಶ್ರೀನಿವಾಸರವರ ಮಧ್ಯೆ ಯಾವುದೇ ವ್ಯವಹಾರ ಇರಲಿಲ್ಲ ಬದಲಾಗಿ ನಾನು ಪಿರ್ಯಾದಿದಾರರಿಂದ ಪಡೆದುಕೊಂಡಿದ್ದ ಸಾಲದ ಮರುಪಾವತಿಗಾಗಿ ಅವರಿಗೆ ನಿಪಿ.1 ರ ಚೆಕ್ಕನ್ನು ನೀಡಿದ್ದೆ ಎಂದರೆ ಸರಿಯಲ್ಲ. ನನ್ನ ಮತ್ತು ಬಟಗನಹಳ್ಳಿಶ್ರೀನಿವಾಸರವರ ಮಧ್ಯೆಯಾವುದೇ ವ್ಯವಹಾರ ಇರದ ಕಾರಣ ಹಾಗೂ ಬಟಗನಹಳ್ಳಿ ಶ್ರೀನಿವಾಸರವರು ನನ್ನ ನಿಪಿ.1 ರ ಚೆಕ್ಕನ್ನು ದುರುಪಯೋಗಪಡಿಸಿಕೊಳ್ಳದ ಕಾರಣ ನಾನು ಅವರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರಿಂದ ಪಡೆದ ಸಾಲದ ಹಣವನ್ನು ಮರುಪಾವತಿ ಮಾಡುವುದನ್ನು ತಪ್ಪಿಸುವ ಉದ್ದೇಶದಿಂದ ನನಗೆ ಪಿರ್ಯಾದಿದಾರರ ಪರಿಚಯ ಇಲ್ಲ ಹಾಗೂ ಅವರಿಂದ ಸಾಲ ಪಡೆದಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ನಿಪಿ.3 ಹಾಗೂ ನಿಪಿ.5 ರ ನೋಟಿಸನ್ನು ಪಿರ್ಯಾದಿದಾರರು ಕಳಹಿಸಿದ ನಂತರ ನೀವು ಪಿರ್ಯಾದಿದಾರರು ಯಾರು ಎಂದು ತಿಳಿದುಕೊಳ್ಳುವ ಪ್ರಯತ್ನ ಪಟ್ಟಿದ್ದೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಪಿರ್ಯಾದಿದಾರರು ಯಾರು ಎಂದೇ ಗೊತ್ತಿರದ ಕಾರಣ ನಾನು ಅವರ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. ಪಿರ್ಯಾದಿದಾರರು ನನ್ನ ನಿಪಿ.1 ರ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ಹೇಳಿ ನಾನು ಅವರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು.,ಕೆ.ಆರ್.ನಗರ**

This is a True Copy of the Court Records Online. Authenticated @ districts.ecourtsindia.com/cnr/KAMS410037072021/truecopy/order-6.pdf

www.ecourtsindia.com